ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 06, 2020**

# ಪತ್ರಿಕಾ ಆಮಂತ್ರಣ

## ಪತ್ರಿಕಾ ಪ್ರಕಟಣೆ

### ಡಾ: ಬಾಬು ಜಗಜೀವನ್‌ರಾಮ್ ಪಾಲಿಸಿದ ಆದರ್ಶ ಮತ್ತು ಚಿಂತನೆಗಳು ಎಲ್ಲಾ ಕಾಲಕ್ಕೂ ಮಾದರಿ : ಬಿ.ಎಸ್. ಯಡಿಯೂರಪ್ಪ

ಬೆಂಗಳೂರು, ಜುಲೈ 06 (ಕರ್ನಾಟಕ ವಾರ್ತೆ): ದೇಶ ಕಂಡ ಅಪ್ರತಿಮ ನಾಯಕ ಡಾ.ಬಾಬು ಜಗಜೀವನ್‌ರಾಮ್ ಅವರು ಪಾಲಿಸಿದ ಆದರ್ಶ ಮತ್ತು ಚಿಂತನೆಗಳು ಎಲ್ಲಾ ಕಾಲಕ್ಕೂ ಮಾದರಿಯಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಅವರು ಇಂದು ವಿಧಾನಸೌಧದ ಪಶ್ಚಿಮದ್ವಾರ ಬಳಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಿದ್ದ ಭಾರತದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್ ಅವರ 34 ನೇ ಪುಣ್ಯತಿಥಿಯ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಶೋಷಿತ ವರ್ಗದ ಜನರಿಗೆ ಆಶಾಕಿರಣವಾಗಿದ್ದ ಅವರ ವ್ಯಕ್ತಿತ್ವ, ಜೀವನ ಚರಿತ್ರೆಯನ್ನು ಯುವ ಪೀಳಿಗೆಗೆ ಪರಿಚಯಿಸುವುದರ ಜೊತೆಗೆ, ಅವರ ಸಾಮಾಜಿಕ ಕಳಕಳಿ ಹಾಗೂ ರಾಜಕೀಯ ವಿಚಾರ–ಧಾರೆಗಳನ್ನು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಹಸಿರು ಕ್ರಾಂತಿಯ ಹರಿಕಾರ ಎಂದೇ ಜನಜನಿತರಾಗಿದ್ದ ಅವರು ಸಮಾಜ ಸೇವೆಯಲ್ಲಿಯೂ ಮುಂಚೂಣಿಯಲ್ಲಿದ್ದ ಅಪರೂಪದ ಜನನಾಯಕರಾಗಿದ್ದರು. ಅವರ ತಮ್ಮ ಕೊನೆ ಉಸಿರಿನವರೆಗೂ ಸತತ ನಾಲ್ಕು ದಶಕಗಳ ಕಾಲ ಸಂಸದರಾಗಿ ಸೇವೆ ಸಲ್ಲಿಸಿ ಹೆಗ್ಗಳಿಕೆಗೆ ಪಾತ್ರವಾಗಿದ್ದರು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಉಂಟಾದ

**ಆಹಾರದ ಕೊರತೆಯನ್ನು ಸಮರ್ಥವಾಗಿ ಎದುರಿಸಿ ಸುಧಾರಿತ ಬೀಜ ಮತ್ತು ತಳಿಗಳನ್ನು ಬಳಸಿಕೊಂಡು ಅವರು ಹಸಿರು ಕ್ರಾಂತಿಯನ್ನು ಸಾಧಿಸಿದರು ಎಂದರು.**

**ದೇಶದ ಬೆನ್ನೆಲುಬಾದ ರೈತ ಮತ್ತು ಯೋಧರಿಗೆ ಸಂಬಂಧಿಸಿದಂತೆ ಜಗಜೀವನ್‌ರಾಮ್ ಅವರ ನಾಯಕತ್ವದಲ್ಲಿ ದೊರೆತ ಮಾರ್ಗದಶನ ಮತ್ತು ನಾಯಕತ್ವ ಉಲ್ಲೇಖಾರ್ಹ ಎಂದರು.**

## ಮುಖ್ಯಮಂತ್ರಿಗಳಿಂದ ನೇಕಾರ ಸಮ್ಮಾನ್ ಯೋಜನೆಗೆ ಚಾಲನೆ

ಬೆಂಗಳೂರು ಜುಲೈ 06 (ಕರ್ನಾಟಕ ವಾರ್ತೆ) :

### ಕೈಮಗ್ಗ ನೇಕಾರರ ಚಟುವಟಿಕೆಗಳ ಪ್ರೋತ್ಸಾಹಿಸಲು "ನೇಕಾರ ಸಮ್ಮಾನ್" ಯೋಜನೆ:

ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪಾರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಆರ್ಥಿಕ ಹಿನ್ನೆಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21ನೇ ಸಾಲಿನಿಂದ ಅನ್ವಯವಾಗುವಂತೆ **"ನೇಕಾರ ಸಮ್ಮಾನ್"** ಎಂಬ ಯೊಸ ಯೋಜನೆಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಣೆ ಮಾಡಿದರು.

ಗೃಹ ಕಚೇರಿ ಕೃಷ್ಣದಲ್ಲಿ ಇಂದು ನೇಕಾರ ಸಮ್ಮಾನ್ ಯೋಜನೆ (ಕೈಮಗ್ಗ ನೇಕಾರರಿಗೆ) ಯಡಿ ನೇಕಾರರ ಖಾತೆಗೆ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಗೆ ಚಾಲನೆ ನೀಡಿ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳು, ಕೈಮಗ್ಗ ಮತ್ತು ಜವಳಿ ಇಲಾಖೆಯು ರಾಜ್ಯದ ಕೈಮಗ್ಗ, ವಿದ್ಯುತ್ ಮಗ್ಗ, ಸಿದ್ದ ಉಡುಪು ಹಾಗೂ ಇತರೆ ವಲಯದ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯ ನಿರ್ವಹಿಸುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆ / ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತತ ರಾಜ್ಯದಲ್ಲಿ ವಿದ್ಯುತ್ ಮಗ್ಗಗಳಲ್ಲಿ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದ್ದು, ವಿಶೇಷವಾಗಿ ಸೀರೆ, ಶರ್ಟಿಂಗ್ ಬಟ್ಟೆ, ಡ್ರೆಸ್ ಮೆಟಿರಿಯಲ್ಸ್ ಇತ್ಯಾದಿಗಳನ್ನು ಉತ್ಪಾದಿಸಲಾಗುತ್ತಿದೆ.

ಈ ಯೋಜನೆಯಡಿ ಕೇಂದ್ರ ಸರ್ಕಾರ ಪ್ರಕಟಿಸಿರುವ ನಾಲ್ಕನೇ ರಾಷ್ಟ್ರೀಯ ಕೈಮಗ್ಗ ಗಣತಿಯ ಪ್ರಕಾರ ರಾಜ್ಯದಲ್ಲಿ 54,789 ಕೈಮಗ್ಗ ನೇಕಾರರು ನೋಂದಣಿ ಮಾಡಿಕೊಂಡಿದ್ದಾರೆ. ಅದರಂತೆ ನೋಂದಾಯಿತ 54,789 ಪ್ರತಿ ಕೈಮಗ್ಗ ನೇಕಾರರಿಗೆ ರೂ. 2,000/- ಗಳ ವಾರ್ಷಿಕ ಆರ್ತಿಕ ನೆರವನ್ನು ನೀಡಲಾಗುವುದು.

ರಾಜ್ಯದಲ್ಲಿ ರೇಷ್ಮೆ, ಹತ್ತಿ ಹಾಗೂ ಉಣ್ಣೆ ವಲಯದ ಕೈಮಗ್ಗ ಮತ್ತು ಪೂರಕ ಚಟುವಟಿಕೆಗಳಲ್ಲಿ ತೊಡಗಿಡುವ ಕೈಮಗ್ಗ ನೇಕಾರರು ಈ ಯೋಜನೆಯಗೆ ಅರ್ಹರಾಗಿರುತ್ತಾರೆ. ನೇಕಾರ ಸಮ್ಮಾನ್ ಯೋಜನೆಯಡಿಯಲ್ಲಿ ಪ್ರತಿ ವರ್ಷ 10.96 ಕೋಟಿ ರೂ ವೆಚ್ಚವಾಗಲಿದೆ ಎಂದು ತಿಳಿಸಿದರು.

ಈ ವರೆಗೆ 40,634 ಕೈಮಗ್ಗ ನೇಕಾರರು ಸೇವಾ ಸಿಂದು ತಂತ್ರಾಂಶದಲ್ಲಿ ನೋಂದಾಯಿಸಿಕೊಂಡಿದ್ದಾರೆ. ಈ ಪೈಕಿ 37,314 ಅರ್ಜಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲಾಗಿದೆ. ಇನ್ನುಳಿದ ಅರ್ಹ ಫಲಾನುಭವಿಗಳಿಗೂ ಮುಂದಿನ ದಿನಗಳಲ್ಲಿ ಆರ್ಥಿಕ ನೆರವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು, ಕೈಮಗ್ಗ ಗಣತಿಯಲ್ಲಿ ನೇಕಾರರ ಮಾಹಿತಿಗಳು ಬಿಟ್ಟು ಹೋಗಿದ್ದರೆ ಅಂತಹವರಿಗೂ ಸಹ ಈ ಯೋಜನೆಯಲ್ಲಿ ಅವಕಾಶ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

**ನೇರ ನಗದು ವರ್ಗಾವಣೆ (ಡಿಬಿಟಿ) ವಿತರಣೆಗೆ ಚಾಲನೆ :**

ಇದೇ ವೇಳೆಯಲ್ಲಿ ವಿದ್ಯುತ್ ಮಗ್ಗ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 1.25 ಲಕ್ಷ ಕೂಲಿ ಕೆಲಸಗಾರರಿಗೆ ಎರಡು ಸಾವಿರ ರೂಪಾಯಿಯ ಪರಿಹಾರಧನವನ್ನು ಒಂದು ಬಾರಿಗೆ ವಿತರಿಸಲಾಗುತ್ತಿದ್ದು, ಈ ವರೆಗೆ ಅನುಮೋದಿಸಲಾದ 8897 ಅರ್ಜಿದಾರರಿಗೆ **ನೇರ ನಗದು ವರ್ಗಾವಣೆ (ಡಿಬಿಟಿ) ವಿತರಣೆಗೆ** ಸಹ ಚಾಲನೆ ನೀಡಿದರು.

ಈ ಯೋಜನೆಯಡಿ 01 ರಿಂದ 20 ಹೆಚ್.ಪಿ. ವರೆಗಿನ ವಿದ್ಯುತ್ ಮಗ್ಗ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ 1.25 ಲಕ್ಷ ಕೂಲಿ ಕೆಲಸಗಾರರಿಗೂ ರೂ. 2000/–ಗಳನ್ನು ಒಂದು ಬಾರಿಗೆ ಪರಿಹಾರ ಧನವನ್ನು ನೇರ ನಗಡು ವರ್ಗಾವಣೆ ಮೂಲಕ ಸಂದಾಯ ಮಾಡಲಾಗುವುದು. ವಿದ್ಯುತ್ ಮಗ್ಗ ಘಟಕದಲ್ಲಿ ಕೂಲಿ ಕೆಲಸ ಮಾಡುತ್ತಿರುವ ಫಲಾನುಭವಿಯ ವಿವರಗಳನ್ನು ಇಲಾಖೆಯ ಸಹಯೋಗದೊಂದಿಗೆ ಸೇವಾ ಸಿಂದು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಘಟಕಗಳ ಮಾಲೀಕರು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಕೋವಿಡ್ – 19 ಮಹಾಮಾರಿ ಹಾಗೂ ಆರ್ಥಿಕ ಹಿನ್ನೆಡೆಯಿಂದ ಸಂಕಷ್ಟದಲ್ಲಿರುವ 1.25 ಲಕ್ಷ ವಿದ್ಯುತ್ ಮಗ್ಗ ಕೆಲಸಗಾರರಿಗೆ ಒಂದು ಬಾರಿಯ ಪರಿಹಾರವಾಗಿ ಪ್ರಸಕ್ತ ಸಾಲಿನಲ್ಲಿ ರೂ. 25.00 ಕೋಟಿ ವೆಚ್ಚ ಮಾಡಲಾಗುವುದು. ಈ ವರೆಗೆ 21,183 ವಿದ್ಯುತ್ ಮಗ್ಗ ಕೂಲಿ ಕೆಲಸಗಾರರ ಅರ್ಜಿಗಳನ್ನು ಅನ್‌ಲೈನ್ ಸೇವಾ ಸಿಂಧು ತಂತ್ರಾಂಶದಲ್ಲಿ ನೋಂದಾಯಿಸಿರುತ್ತಾರೆ. ಇದರಲ್ಲಿ 8,897 ಅರ್ಜಿಗಳನ್ನು ಪರಿಶೀಲಸಿ ಅನುಮೋದನೆ ನೀಡಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಜವಳಿ ಸಚಿವ ಶ್ರೀಮಂತ ಬಾಳಾಸಾಹೇಬ್ ಪಾಟೀಲ್, ಎಂಎಸೆಂಇ, ಕೈಮಗ್ಗ ಮತ್ತು ಜವಳಿ ಹಾಗೂ ವಾರ್ತ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ. ಮಹೇಶ್ವರರಾವ್, ಕೈಮಗ್ಗ ಮತ್ತು ಜವಳಿ ಇಲಾಖೆ ಆಯುಕ್ತ ಉಪೇಂದ್ರ ಪ್ರತಾಪ್ ಸಿಂಗ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕರ್ನಾಟಕ ಮುಕ್ತ ಶಾಲೆ – ಕೆ.ಓ.ಎಸ್ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಜುಲೈ 06 (ಕರ್ನಾಟಕ ವಾರ್ತೆ) : ನೋವೆಲ್ ಕೊರೋನಾ ವೈರಾಣು ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ದಿನಾಂಕ: 06-07-2020ರಿಂದ ದಿನಾಂಕ: 15-07-2020ರ ವರೆಗೆ ನಡೆಯಬೇಕಾಗಿದ್ದ ಕರ್ನಾಟಕ ಮುಕ್ತ ಶಾಲೆ – ಕೆ.ಓಎಸ್ ಪರೀಕ್ಷೆಯನ್ನು ಮುಂದೂಡಲಾಗಿದೆ. ಪರೀಕ್ಷೆ ನಡೆಯುವ ದಿನಾಂಕಗಳನ್ನು ಮುಂದೆ ಪ್ರಕಟಿಸಲಾಗುವುದು ಎಂದು ನಿರ್ದೇಶಕರು, (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು, ಜುಲೈ 06 (ಕರ್ನಾಟಕ ವಾರ್ತೆ) : ಬೆಂಗಳೂರು ಜಲಮಂಡಲಿಯ ಯು.ಎಫ್.ಡಬ್ಲ್ಯೂ. ಯೋಜನೆಯಡಿ 700 ಮಿ.ಮೀ ವ್ಯಾಸದ ಜೋಡಣೆ, ವಾಲ್ವ್ ಮತ್ತು ಬೃಹತ್ ಹರಿವಿನ ಮಾಪನಗಳ (Bulk flow meters) ಅಳವಡಿಕೆ ಕೆಲಸಗಳ ಸಲುವಾಗಿ ಕಾವೇರಿ ನೀರು ಸರಬರಾಜು 3ನೇ ಹಂತವನ್ನು ದಿನಾಂಕ: 08.07.2020 ರಂದು 8 ಗಂಟೆಗಳ ಕಾಲ ಸ್ಥಗಿತಗೊಳಿಸುತ್ತಿರುವ ಕಾರಣ ಅಂದು ಬೆಳಗ್ಗೆ 08:00 ಗಂಟೆಯಿಂದ ಸಂಜೆ 04:00 ಗಂಟೆಯವರೆಗೆ ಒಟ್ಟು 8 ಗಂಟೆಗಳ ಕಾಲ ಈ ಕೆಳಕಂಡ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಯಶವಂತಪುರ, ಭಾಷ್ಯಂ ಪಾರ್ಕ್, ಮಲ್ಲೇಶ್ವರಂ, ಶೇಷಾದ್ರಿಪುರಂ, ಓಕಳಿಪುರಂ, ಶ್ರೀರಾಂಪುರ, ಮತ್ತಿಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು

ಸದಾಶಿವನಗರ, ಕೆ.ಜಿ.ಟವರ್, ಜಯಮಹಲ್, ಪ್ಯಾಲೇಸ್ ಗುಟ್ಟಹಳ್ಳಿ, ಆರ್.ಎಂ.ವಿ. 2ನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಆರ್.ಟಿ. ನಗರ, ಹೆಬ್ಬಾಳ, ದಿಣ್ಣೂರು, ಸಂಜಯ್‌ನಗರ, ಮನೋರಾಯನಪಾಳ್ಯ,ಗಂಗಾನಗರ, ಚಿಕ್ಕಪೇಟೆ, ಕೆ.ಆರ್.ಮಾರುಕಟ್ಟೆ, ಕಬ್ಬನ್ ಪೇಟೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಧರ್ಮರಾಯ ಸ್ವಾಮಿ ದೇವಸ್ಥಾನ, ಅವಿನ್ಯೂ ರಸ್ತೆ, ಮೆಜೆಸ್ಟಿಕ್ ಪ್ರದೇಶ, ಕಸ್ತೂರಿನಗರ, ಶಿವಾಜಿನಗರ, ಫ್ರೇಜರ್ ಟೌನ್, ಭಾರತಿ ನಗರ, ಸಂಪಂಗಿರಾಮನಗರ, ಆನಂದರಾವ್ ಸರ್ಕಲ್, ಕೋಲ್ಸ್‌ಪಾರ್ಕ್, ಪುಲಕೇಶಿ ನಗರ, ಮಚಲೀ ಬೆಟ್ಟ, ಭಾರತಿ ನಗರ, ಕಾಕ್‌ಸ್ಟೋನ್, ಡಿ.ಜೆ.ಹಳ್ಳಿ, ವಸಂತನಗರ, ಮಾರುತಿಸೇವಾನಗರ, ವಿಧಾನಸೌಧ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜೀವನ್ ಭೀಮಾನಗರ, ಐಟಿಐ ಕಾಲೋನಿ, ಇಂದಿರಾನಗರ 1ನೇ & 2ನೇ ಹಂತ, ಲಕ್ಷ್ಮೀಪುರ, ಶಾಂತಿನಗರ, ಆಂಧ್ರ ಕಾಲೋನಿ, ಕಲ್ಲಹಳ್ಳಿ, ಭಾಗಶಃ ಹೆಚ್.ಎ.ಎಲ್.3ನೇ ಹಂತ, ತಿಪ್ಪಸಂದ್ರ, ಎಲ್.ಐ.ಸಿ. ಕಾಲೋನಿ, ಆನಂದಪುರ, ಸುಧಾಮನಗರ, ಜೀವನ್ ಭೀಮಾನಗರ ಮತ್ತು ಇಂದಿರಾನಗರ ಸೇವಾಠಾಣೆಗಳ ಸುತ್ತಮುತ್ತಲಿನ ಪ್ರದೇಶಗಳು.

ಹಲಸೂರು ಜಿ.ರಸ್ತೆ, ಓಜಿಐ ಗಾರ್ಡನ್, ಮರ್ಫಿ ಟೌನ್(ಹೊಯ್ಸಳ ನಗರ), ಕೇಂಬ್ರಿಡ್ಜ್ ಬಡಾವಣೆ, ಎಂ.ವಿ.ಗಾರ್ಡನ್, ಡಿಕೆನ್ಸ್‌ನ್ ರಸ್ತೆ, ಎಂ.ಜಿ.ರಸ್ತೆ, ಗೌತಮ ಪುರ, ಜಯರಾಜನಗರ, ಆಗಅಬ್ಬಸಳ್ಳಿ ರಸ್ತೆ, ದೊಮ್ಮಲೂರು ಮತ್ತು ಹಲಸೂರು ಸೇವಾಠಾಣೆಯ ಸುತ್ತಮುತ್ತಲಿನ ಪ್ರದೇಶಗಳು.

ಹನುಮಂತನಗರ, ಶ್ರೀನಗರ, ಗಿರಿನಗರ, ಅವಲಹಳ್ಳಿ, ಮುನೇಶ್ವರ ಬಡಾವಣೆ, ಟೆಲಿಕಾಮ್ ಬಡಾವಣೆ, ಚಾಮರಾಜಪೇಟೆ, ಆಜಾದ್‌ನಗರ, ವಿಠ್ಠಲ ನಗರ, ಚಲುವಾದಿಪಾಳ್ಯ, ರಾಘವೇಂದ್ರ ಬ್ಲಾಕ್, ಕಾಳಿದಾಸ ಬಡಾವಣೆ, ಬ್ಯಾಟರಾಯನಪುರ, ಗವಿಪುರಂ, ಲಕ್ಷ್ಮೀಪುರ, ಬಸಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

## Shutdown of the Cauvery water Supply

**Bengaluru, July 06 (Karnataka Information):** Cauvery water supply project 3rd stage will be under shut down for the purpose of 700 mm dia linking work under UFW project, fixing of valves and Bulk flow meters on 08.07.2020 for 8 hours. Hence, water supply to following areas would be affected due to the shut down on that day from 8.00 am to 04:00 pm.

Yeshwanthpura, Bashyam park, Malleshwara, Sheshadripuram, Okalipura, Srirampura, Mathikere, & surrounding area.

Sadhashivanagara, KG Tower, Sheshadripuram, Jayamahal, Palace Guttahalli, RMV 2nd Stage & surrounding area. R.T.Nagara, Hebbala, Dinnur, Sanjayanagara, Manorayanapalya, Ganganagara & surrounding area.

Chickpete, KR Market, Cubbonpet & surrounding area, Dharamarayaswamy temple, Avenue Road, Majestic Area, Kasturiba Road, Shivajinagar, Frazer Town, Bharathi Nagara, Sampangiranmangara, Anandarao circle, Colespark, Pulakeshinagara, Machlibetta, Bharathingara, Cockstown, DJ Halli, Vasanthanagara, Maruthisevanagar, Vidhanasoudha & surrounidng areas.

Jeevanbheemanagara, ITI Colony, Indiranagara 1st Stage & 2nd stage Lakshmipura, Shastrinagara, Andhra Colony, Kallahalli, Partial HAL 3rd Stage, Thippasandra, LIC colony, Anandapura, Sudhamanagara & surrounding area under Jeevanbheemanagar & Indiranagara S/stn. Ulsoor G street, OGI Garden, Murphy Town (Hoysala Nagara), Cambridge layout, M.V garden, Dickenson road, M G road, Gouthampura, Jayarajnagar, Aga Abbasali road, Domlur & surrounding areas under Ulsoor S/stn. Hanumanthnagar, Srinagar, Girinagar, Avalahalli, Muneshwara layout, Telecom layout, Chamarajpet, Ajadnagar, Vittalnagar, Chaluvadipalya, Raghavendra block, Kalidasa layout, Bytarayanapura, Gavipuram, Laxmipura, Basappa layout and surrounding areas.

# ಖಾಸಗಿ ಶಿಕ್ಷಕರಿಗೆ ನೆರವು: ಸರ್ಕಾರಿ ಶಿಕ್ಷಕರಿಗೆ ಸುರೇಶ್‌ಕುಮಾರ್ ಮನವಿ

**ಬೆಂಗಳೂರು** ಜುಲೈ 06 (ಕರ್ನಾಟಕ ವಾರ್ತೆ) : ಕೊರೋನಾ ಕಾಲಘಟ್ಟದಲ್ಲಿನ ಸಂಕಷ್ಟದ ಹಿನ್ನೆಲೆಯಲ್ಲಿ ಆರ್ಥಿಕವಾಗಿತೀವ್ರ ದುಃಸ್ಥಿತಿಯಲ್ಲಿರವ ಸಾರ್ವಜನಿಕ ಶಿಕ್ಷಣ ಇಲಾಖೆಯ ಖಾಸಗಿ ಅನುದಾನ ರಹಿತ ಶಾಲೆಗಳ ಶಿಕ್ಷಕರ ನೆರವಿಗೆ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರು ಧಾವಿಸಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಮನವಿ ಮಾಡಿದ್ದಾರೆ.

ಸೋಮವಾರ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಸಚಿವರು, ಖಾಸಗಿ ಶಾಲಾ ಶಿಕ್ಷಕರು ತೀವ್ರ ಸಂಕಷ್ಟದಲ್ಲಿರುವುದನ್ನು ನಮ್ಮ ಇಲಾಖೆ ಗಮನಿಸಿದೆ. ಈ ಕುರಿತು ಸಾರ್ವಜನಿಕವಾಗಿಯೂ ಹೆಚ್ಚಿನ ಕಳಕಳಿ ವ್ಯಕ್ತವಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಅವರ ನೆರವಿಗೆ ನಾವು ಧಾವಿಸುವುದು ಅಗತ್ಯವೆಂಬುದನ್ನು ನಾವೆಲ್ಲರೂ ಕಂಡುಕೊಳ್ಳಬೇಕಾದ ಸಂದರ್ಭ ಇದಾಗಿದೆ ಎಂದರು.

ಇದು ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿಯೂ ಸಹ ಆಗಿದೆ. ಹಾಗಾಗಿ ನಮ್ಮ ಶಿಕ್ಷಕ ಬಂಧುಗಳು ಒಂದು ಇಲ್ಲವೇ ಎರಡು ದಿನಗಳ ವೇತನವನ್ನು ನೀಡುವ ಮೂಲಕ ನಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಪ್ರದರ್ಶಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಸಂಕಷ್ಟದಲ್ಲಿರುವ ಖಾಸಗಿ ಶಾಲಾ ಶಿಕ್ಷಕರ ನೆರವಿಗೆ ಹೇಗೆ ಬರಬಹುದೆಂಬ ಕುರಿತು ಸರ್ಕಾರದ ಮಟ್ಟದಲ್ಲಿಯೂ ಚಿಂತನೆ ನಡೆದಿದೆ. ಇಲಾಖೆಯ ಲಭ್ಯ ಸಂಪನ್ಮೂಲಗಳ ಮೂಲಕವೂ ಕಷ್ಟದಲ್ಲಿರುವ ನಮ್ಮ ಶಿಕ್ಷಕರಿಗೆ ಇತಿಮಿತಿಗಳಲ್ಲಿ ಆರ್ಥಿಕ ಸಹಕಾರ ನೀಡಲು ಸರ್ಕಾರ ಸಹ ಅವಕಾಶಗಳನ್ನು ಅವಲೋಕಿಸುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ.

ಈ ಶಿಕ್ಷಕರಿಗೆ ನೆರವಾಗಲು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿಯವರು ತಮ್ಮ ಒಂದು ತಿಂಗಳ ವೇತನ ನೀಡಲು ಮುಂದಾಗಿದ್ದಾರೆ. ನಾನೂ ಸಹ ನನ್ನ ಪಾಲನ್ನು ನೀಡುವೆಎಂದು ಹೇಳಿರುವ ಸುರೇಶ್‌ಕುಮಾರ್, ನಮ್ಮ ಶಿಕ್ಷಕರು ಉದಾರತೆ ಮೆರೆಯುವ ಮೂಲಕ ಸಮಾಜಕ್ಕೆ ಇಂದು ಅವಶ್ಯವಿರುವ ಸಕಾರಾತ್ಮಕ ಸಂದೇಶ ನೀಡಬೇಕೆಂದು ಮನವಿ ಮಾಡಿದ್ದಾರೆ.

ಸರ್ಕಾರ ತನ್ನ ಕಠಿಣ ಪರಿಸ್ಥಿತಿಯಲ್ಲಿಯೂ ನಮ್ಮ ಶಿಕ್ಷಕರ ವೇತನ ಭತ್ಯೆಗಳನ್ನು ನೀಡಲು ಯಾವುದೇ ವಿಳಂಬ ಮಾಡಿಲ್ಲ. ಈ ಸಂದರ್ಭದಲ್ಲಿ ನಾವೆಲ್ಲ ಮಾನವೀಯ ಗುಣವನ್ನು ಮರೆಯಬೇಕಿದೆ. ಆ ಮೂಲಕ ನಮ್ಮ ಖಾಸಗಿ ಶಾಲಾ ಶಿಕ್ಷಕರ ನೆರವಿಗೆ ನಮ್ಮ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರು ಮುಂದೆ ಬರಬೇಕೆಂದು ಸುರೇಶ್‌ಕುಮಾರ್ ಶಿಕ್ಷಕ ಸಮೂಹದಲ್ಲಿ ಮನವಿ ಮಾಡಿದ್ದಾರೆ.

ಕೊರೋನಾ ಸಂಕಷ್ಟದ ಸಮಯದಲ್ಲಿ ಹಲವಾರು ರೀತಿಯ ವೃತ್ತಿ ನಿರತರು ಸಂಕಷ್ಟದಲ್ಲಿದ್ದಾರೆ. ಆದರೆ ರಾಷ್ಟ್ರ ನಿರ್ಮಾತೃಗಳು ಹಾಗೂ ನಮ್ಮ ಮಕ್ಕಳಿಗಾಗಿ ದುಡಿಯುತ್ತಿರುವ ಶಿಕ್ಷಕರು ಸಂಕಷ್ಟದಲ್ಲಿದ್ದಾರೆ. ಅವರ ನೆರವಿಗೆ ಮುಂದೆ ಬರುವುದು ಸಮಾಜದ ಜವಾಬ್ದಾರಿಯಾಗಿದ್ದು, ಅದನ್ನು ನಮ್ಮ ಶಿಕ್ಷಕ ಸಮುದಾಯ ಪ್ರದರ್ಶಿಸುವ ಸಮಯ ಇದಾಗಿದೆ ಎಂದು ಸುರೇಶ್‌ಕುಮಾರ್ ತಿಳಿಸಿದ್ದಾರೆ.

## ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧೀನದಲ್ಲಿರುವ ಶಾದಿ ಮಹಲ್, ಹಾಸ್ಟಲ್, ಮುಂತಾದ ಕಟ್ಟಡಗಳು ಕೋವಿಡ್ – 19ರ ಸೋಂಕಿತರಿಗೆ ಮುಕ್ತ

ಬೆಂಗಳೂರು, ಜುಲೈ 06 (ಕರ್ನಾಟಕ ವಾರ್ತೆ) :

**ವಕ್ಫ್ ಮಂಡಳಿಯ ಅಧೀನದಲ್ಲಿರುವ ಕಟ್ಟಡಗಳು ಕೋವಿಡ್ – 19ರ ಸೋಂಕಿತರಿಗೆ ನೆರವಿಗೆ ಬಳಸಿಕೊಳ್ಳಲು ಮನವಿ:**

ದಿನಾಂಕ: 29-06-2020ರಂದು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರು, ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನೊಳಗೊಂಡ ನಿಯೋಗವು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾರಕ ಕೋವಿಡ್ – 19ರ ಸೋಂಕಿನ ಈ ಸಮಯದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ತನ್ನ ಸಂಪೂರ್ಣ ಸಹಭಾಗಿತ್ವದೊಂದಿಗೆ ಹೆಮ್ಮಾರಿಯ ತಡೆಗೆ ಸದಾಕಾಲ ಸರ್ಕಾರದ ಜೊತೆಗಿದೆ ಎಂದು ತಿಳಿಸಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧೀನದಲ್ಲಿರುವ ವಕ್ಫ್ ಸಂಸ್ಥೆಗಳಲ್ಲಿರುವ ಶಾದಿ ಮಹಲ್, ಹಾಸ್ಟಲ್, ಮುಂತಾದ ಕಟ್ಟಡಗಳು ಕೋವಿಡ್ – 19 ಸೋಂಕಿತರಿಗೆ, ಆರೋಗ್ಯ ಕಾರ್ಯಕರ್ತರಿಗೆ ಕ್ವಾರಂಟೈನ್ / ಐಸೋಲೇಷನ್ ಕೇಂದ್ರಗಳಿಗೆ ಮುಕ್ತವಾಗಿದ್ದು, ರಾಜ್ಯದಲ್ಲಿರುವ ಇಂತಹ ಎಲ್ಲ ಸ್ಥಳಗಳ ಮಾಹಿತಿಯನ್ನು ಮುಖ್ಯಮಂತ್ರಿಗಳಿಗೆ ನೀಡಿ ಕೋವಿಡ್ – 19 ಸೋಂಕಿನ ಹರಡುವಿಕೆಯ ಈ ಗಂಭೀರ ಸಮಯದಲ್ಲಿ ಉಪಯೋಗಿಸಿಕೊಳ್ಳಳು ಮನವಿ ಮಾಡಿದರು.

**ಕರ್ಫ್ಯೂ ಅವಧಿಯನ್ನು ಬದಲಾವಣೆಗೆ ಮನವಿ:**

ಮಾರಕ ಸೋಂಕಿನ ಹರಡುವಿಕೆಯ ತೀವ್ರತೆಯನ್ನು ತಡೆಯಲು ರಾಜ್ಯದಲ್ಲಿ ರಾತ್ರಿ 8.00 ಗಂಟೆಯಿಂದ ಮುಂಜಾಜೆ 5.00 ಗಂಟೆಯ ವರೆಗೆ ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದು, ಈ ಸಮಯದಲ್ಲಿ ರಾತ್ರಿ 8.00 ಗಂಟೆಯಿಂದ 9.00 ಗಂಟೆಯ ನಡುವಿನ ಅಂತರದಲ್ಲಿ ರಾತ್ರಿ ವೇಳೆ ಇಷಾ ಪ್ರಾರ್ಥನೆಯನ್ನು ಕೈಗೊಳ್ಳಳು ಅನುಕೂಲವಾಗುವಂತೆ ಕರ್ಫ್ಯೂ ಅವಧಿಯನ್ನು ರಾತ್ರಿ 9.00ರಿಂದ ಬೆಳಿಗ್ಗೆ 5.00ಗಂಟೆಗೆ ಪರಿಷ್ಕರಿಸಿ ಆದೇಶಿಸಬೇಕೆಂದು ವಿನಂತಿಸಲಾಯಿತು.

**ಖಾಲಿ ಇರುವ ಹುದ್ದೆಗಳ ಭರ್ತಿಗೆ ಮನವಿ:**

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು ಸರ್ಕಾರದಿಂದ ಅನುಸ್ಥಾಪಿತವಾದ ಶಾಸನಬದ್ಧ ಮಂಡಳಿಯಾಗಿದ್ದು, ರಾಜ್ಯದಲ್ಲಿರುವ ವಕ್ಫ್ ಸಂಸ್ಥೆಗಳು, ಆಸ್ತಿಗಳ ಮೇಲ್ವಿಚಾರಣೆ, ಆಡಳಿತ, ಅಭಿವೃದ್ಧಿಯ ಕಾರ್ಯಗಳನ್ನು ಹೊಂದಿದ್ದು ಇವುಗಳ ಅನುಷ್ಠಾನಕ್ಕಾಗಿ ಸರ್ಕಾರದಿಂದ ಒಟ್ಟು 11 ಅಧಿಕಾರಿ ವೃಂದದ ಹುದ್ದೆಗಳನ್ನು ನಿಯೋಜನೆಯ ಮೂಲಕ ಭರ್ತಿ ಮಾಡಬೇಕಾಗಿದ್ದು, ಇವುಗಳಲ್ಲಿ ಖಾಲಿಯಾಗಿರುವ 10 ಅಧಿಕಾರಿ ವೃಂದದ ಹುದ್ದೆಗಳನ್ನು ಒಳಗೊಂಡಂತೆ ಸರ್ಕಾರದಿಂದ ನಿಯೋಜನೆ ಮೂಲಕ ಹಾಗೂ ಗ್ರೂಫ್– ಸಿ ಮತ್ತು ಗ್ರೂಪ್– ಡಿ ವೃಂದದ ಒಟ್ಟು 138 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿ ಮಂಡಳಿಯ ಪರಿಣಾಮಕಾರಿ ಹಾಗೂ ಸುಗಮ ಆಡಳಿತಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಡಾ. ಮೊಹಮ್ಮದ್ ಯೂಸಫ್, ಮಂಡಳಿಯ ಸದಸ್ಯರಾದ ತನ್ವೀರ್ ಸೇಠ್, ಮೌಲಾನ್ ಎನ್.ಕೆ.ಎಮ್ ಶಾಫಿ ಸದಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇಸ್ಲಾವುದ್ದೀನ್ ಜೆ ಗದ್ಯಾಳ್ ಹಾಗೂ ಸರ್ವೆ ಅಧಿಕಾರಿ ಮುಜಿಬುಲ್ಲಾ ಜಫ್ಹಾರಿ ಉಪಸ್ಥಿತರಿದ್ದರು.